ಶ್ರೀ ಜಿ.ಪುಟ್ಟಸ್ವಾಮಿಗೌಡ:- ಸನ್ಮಾನ್ಯ ಸದಸ್ಯರು ಉತ್ತಮವಾದ ಸಲಹೆ ಕೊಟ್ಟಿದ್ದಾರೆ, ಸರ್ಕಾರ ಅದನ್ನು ಪರಿಶೀಲಿಸುತ್ತದೆ.

ಉಪಸಭಾಧ್ಯಕ್ಷಿಣಿಯವರು:- ಶ್ರೀಯುತ ಆರ್.ವಿ.ದೇಶಪಾಂಡೆ, ಆಬ್ಸೆಂಟ್. ಶ್ರೀಯುತ ಬಸವರಾಜ ರಾಯರೆಡ್ಡಿ, ಆಬ್ಸೆಂಟ್. ತಡೆ ಹಿಡಿಯಲಾದ ಪ್ರಶ್ನೆಗಳು, ಶ್ರೀಯುತ ಚಿಕ್ಕಮಾದುರವರು 1490 ತಡೆ ಹಿಡಿಯಲಾದ ಪ್ರಶ್ನೆ ಕೇಳಿ.

ಶ್ರೀ ಎನ್.ಚಿಕ್ಕಮಾದು :-ಉತ್ತರ ಕಳುಹಿಸಿಲ್ಲ ಮಾನ್ಯ ಸಭಾಧ್ಯಕ್ಷಿಣಿಯವರೆ.

ಉಪಸಭಾಧ್ಯಕ್ಷಿಣಿಯವರು:- ಅರಣ್ಯ ರಾಜ್ಯ ಮಂತ್ರಿಗಳಿಂದ, ಈಗ ಕಾಗದ ಬಂದಿದೆ, ಇದಕ್ಕೆ ಮತ್ತೆ ಟೈಮ್ ಕೇಳಿದ್ದಾರೆ. ಮುಂದೆ ತೆಗೆದುಕೊಳ್ಳೋಣ.

ಶ್ರೀ ಬಿ.ಶಿವರಾಮು:- ಈಗ ತಡೆ ಹಿಡಿಯಲಾದ ಪ್ರಶ್ನೆಗೆ ಉತ್ತರ ಬಂದಿಲ್ಲ. ಅಸೆಂಬ್ಲಿ 31ಕ್ಕೆ ಮುಗಿಯುತ್ತದೆ. ಈ ಪ್ರಶ್ನೆಗಳಿಗೆ ಯಾವಾಗ ಉತ್ತರ ಬರುತ್ತದೆ. ನನ್ನ ಪ್ರಶ್ನೆಗೆ ಕೂಡ ಉತ್ತರ ಬಂದಿಲ್ಲ. ಈ ಸಾರಿ ಬರದಿದ್ದರೆ ಮುಂದಿನ ಸಾರಿ ಮತ್ತೆ ಅವರು ಪ್ರಶ್ನೆ ಹಾಕಬೇಕಾಗುತ್ತದೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ನನ್ನ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಉಪಸಭಾಧ್ಯಕ್ಷಿಣಿಯವರು:-ಉತ್ತರ ಸರ್ಕಾರದಿಂದ ಬರಬೇಕಲ್ಲಾ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಅಧ್ಯಕ್ಷರೇ ಇನ್ನು ಒಂದು ವಿಚಾರ ಏನೆಂದರೆ ನನ್ನ ಮತ್ತೆ ಒಂದು ಪ್ರಶ್ನೆಗೆ ಉತ್ತರ ಬರಬೇಕಾಗಿತ್ತು. ಆದರೆ ಇನ್ನೂ ಮೂರು ತಿಂಗಳು ಟೈಮ್ ಕೇಳಿದ್ದಾರೆ. ಇದೂ 4 ಸಾರಿ. ಈ ಸಾರಿ ಬರುವುದಿಲ್ಲ ಮುಂದಿನ ಸಲ ಮತ್ತೆ ನೀವು ಪ್ರಶ್ನೆ ಹಾಕಬೇಕು ಎಂದು ಹೇಳಿ ಪತ್ರ ಕಳುಹಿಸಿದ್ದಾರೆ. ಇದೇ ರೀತಿ ಆದರೆ ಸರ್ಕಾರದಲ್ಲಿ ನಾವು ಯಾವ ರೀತಿ ಪ್ರಶ್ನೆ ಕೇಳಬೇಕು, ತಾವು ದಯಮಾಡಿ ಇದರ ಬಗ್ಗೆ ತಿಳಿಸಬೇಕು.

(ಗೊಂದಲ)

ಶ್ರೀ ಎಲ್.ಆರ್.ಶಿವರಾಮೇಗೌಡ:-ಈಗ ವರ್ಗಾವಣೆಯಾದ ಪ್ರಶ್ನೆಗಳಿಗೆ ಎಷ್ಟು ದಿವಸಗಳಲ್ಲಿ ಉತ್ತರ ಕೊಡುತ್ತಾರೆಂದು ದಯವಿಟ್ಟು ಹೇಳಿ.

ಶ್ರೀ ಕೆ.ಹರ್ಷಕುಮಾರಗೌಡ;-ಮಾನ್ಯ ಅಧ್ಯಕ್ಷರೆ, ನನ್ನ ತಡೆಹಿಡಿಯಲಾದ 1978ನೇ ಪ್ರಶ್ನೆಗೆ ಇನ್ನೂ ಉತ್ತರವನ್ನು ಒದಗಿಸಿಲ್ಲ. ಆದರೂ ಪರವಾಗಿಲ್ಲ, ತಮ್ಮ ಮುಖಾಂತರ ನಾನು ಕೇಳುತ್ತಿದ್ದೇನೆ.

ಶ್ರೀ ಎನ್.ಚಿಕ್ಕೇಗೌಡ:- ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಗೆ ಬಹಳ ದೊಡ್ಡ ಉತ್ತರಗಳನ್ನು ಒದಗಿಸಬೇಕಾಗಿದೆ. ಅಲ್ಲದೆ ಅನೇಕ ಇಲಾಖೆಗಳಿಂದ ಮಾಹಿತಿಗಳನ್ನು ತರಿಸಬೇಕಾಗಿದೆ. ಆದುದರಿಂದ ಇದರ ಬಗ್ಗೆ ನಾನು ತಮಗೆ ಪತ್ರವನ್ನು ಬರೆದು ಸ್ವಲ್ಪ ಕಾಲಾವಕಾಶವನ್ನು ದಯವಿಟ್ಟು ಕೊಡಬೇಕೆಂದು ಕೇಳಿಕೊಂಡಿದ್ದೇನೆ.

ಶ್ರೀ ಕೆ.ಹರ್ಷಕುಮಾರಗೌಡ:- ಮಾನ್ಯ ಉಪಾಧ್ಯಕ್ಷಿಣಿಯವರೇ,ಇದು ಒಂದು ಸಾಮೂಹಿಕ ಪ್ರಶ್ನೆಯಾಗಿದೆ. ಇಡೀ ಸದನದ ಪ್ರಶ್ನೆ ಏನೆಂದರೆ . . . .

(ಗೊಂದಲ)

ಈ ರೀತಿ ತಡೆಹಿಡಿಯುವುದಾದರೆ ಮತ್ತೆ ನಾವು ಪ್ರಶ್ನೆಯನ್ನು ಕೇಳಬೇಕಾಗಿಲ್ಲ ಹಾಗೂ ಶಾಸಕರು ಪದೇ ಪದೇ ಪ್ರಶ್ನೆಯನ್ನು ಕೇಳಬೇಕಾಗಿಲ್ಲ. ಸರ್ಕಾರದ ಸಿಬ್ಬಂದಿ ಅವರ ಹತ್ತಿರ ಜವಾಬ್ದಾರಿಯಿಂದ ಉತ್ತರವನ್ನು ತರಿಸುವಂಥ ಕೆಲಸವನ್ನು ಮಾಡಬೇಕು. ಸಿಬ್ಬಂದಿವರ್ಗಕ್ಕೆ

ಕಡಿವಾಣ ಹಾಕಬೇಕು. ನಾನು ಮತ್ತೆ ಪ್ರಶ್ನೆಯನ್ನು ಕೇಳುವುದಿಲ್ಲ. ಆದರೆ ಈ ಸದನದಲ್ಲಿ ನನಗೆ ಉತ್ತರ ಬರಬೇಕು.

ಶ್ರೀ ಕೆ.ಶಿವರಾಮು :- ಮಾನ್ಯ ಉಪಾಧ್ಯಕ್ಷಿಣಿಯವರೇ, ನನ್ನದೂ ಕೂಡ ಇದೇ ಸಮಸ್ಯೆ. ನನ್ನ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದ್ದೀರಿ. ಈ ರೀತಿ ಮಾಡುವುದಾದರೆ ನಾವೆಲ್ಲರೂ ಒಟ್ಟಿಗೆ ಇಲ್ಲಿ ಧರಣಿ ಕೂರಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷಿಣಿಯವರು:- ಇಷ್ಟೊಂದು ಜನ ಒಟ್ಟಿಗೇ ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಎಲ್.ಆರ್.ಶಿವರಾಮೇಗೌಡ:- ಮಾನ್ಯ ಉಪಾಧ್ಯಕ್ಷಿಣಿಯವರೆ, ತೊಂದರೆ ಬಂದಿರತಕ್ಕದ್ದು ಮಂತ್ರಿಗಳಿಗಲ್ಲ, ನಮಗೆ ಬಂದಿರತಕ್ಕದ್ದು. ಅಧಿಕಾರಿಗಳು ಮಾಡತಕ್ಕ ತಪ್ಪನ್ನು ಸರಿಪಡಿಸಿ. . .

(ಗೊಂದಲ)

ಉಪಾಧ್ಯಕ್ಷಿಣಿಯವರು:- ಈಗ ಪ್ರಶ್ನೋತ್ತರ ಕಾಲ ಮುಗಿದಿದೆ.

(ಗೊಂದಲ)

ಉಪಾಧ್ಯಕ್ಷಿಣಿಯವರು:- ಮಂತ್ರಿಗಳೇ, ಉತ್ತರವನ್ನು ಆದಷ್ಟು ಬೇಗ ತರಿಸಿಕೊಡುತ್ತೇನೆಂದು ಹೇಳಿ.

ಶ್ರೀ ಎನ್.ಚಿಕ್ಕೇಗೌಡ:- ತರಿಸಿಕೊಡುತ್ತೇನೆ.

ಶ್ರೀ ಕೆ.ಹರ್ಷಕುಮಾರಗೌಡ:- ನಾವು ಶಾಸಕರಾಗಿ ಪದೇ ಪದೇ ಪ್ರಶ್ನೆ ಕೇಳಬೇಕಾಗಿದೆ. ಒಂದು ಸಾರಿ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರ ಕೊಡುತ್ತಾರೆಯೇ ಎಂಬುದನ್ನು ಸರ್ಕಾರದವರು ಹೇಳಬೇಕು.

(ಗೊಂದಲ)

ಉಪಾಧ್ಯಕ್ಷಿಣಿಯವರು:- ತಾವು ಆದಷ್ಟು ಬೇಗ ತರಿಸಿಕೊಡುವುದಕ್ಕಾಗುತ್ತದೆಯೇ? ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. . . . .

ಶ್ರೀ ಎನ್.ಚಿಕ್ಕೇಗೌಡ:-ತರಿಸಿಕೊಡುತ್ತೇನೆ. ಏಕೆಂದರೆ ಉತ್ತರ ಒಂದೇಕಾಲದಲ್ಲಿ. . ...

(ಗೊಂದಲ)

ಶ್ರೀ ಕೆ.ಹರ್ಷಕುಮಾರಗೌಡ:- ನಾನು ತಮ್ಮಲ್ಲಿ ಪ್ರಾರ್ಥಿಸುವುದೇನೆಂದರೆ, ನಾವು ಸರ್ಕಾರಕ್ಕೆ ಪದೇ ಪದೇ ಪ್ರಶ್ನೆಗಳನ್ನು ಹಾಕಬೇಕೇ?

(ಗೊಂದಲ)

ಶ್ರೀ ಕೆ.ಹರ್ಷಕುಮಾರಗೌಡ:- ನಾನು ಅಲ್ಲಿ ಪದೇ ಪದೇ ಪ್ರಶ್ನೆಗಳನ್ನು ಬರೆಯುತ್ತಾ ಕೂತುಕೊಳ್ಳಬೇಕೇ ಅಥವಾ ಅದೇ ಪ್ರಶ್ನೆಗಳನ್ನು ಕೇಳುತ್ತಾ ಹೋಗಬೇಕೇ? ಸರ್ಕಾರ ಅಧಿಕಾರಿಗಳಿಂದ ಸರಿಯಾದ ಮಾಹಿತಿಗಳನ್ನು ತರಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ ?

ಉಪಾಧ್ಯಕ್ಷಿಣಿಯವರು:- ಈ ಅಧಿವೇಶನದಲ್ಲಿ ಹೆಲ್ಡ್ ಓವರ್ ಪ್ರಶ್ನೆಗಳಿಗೆ ಉತ್ತರಗಳು ಬರದಿದ್ದರೆ ಮತ್ತೆ ಸದಸ್ಯರ ಆ ಪ್ರಶ್ನೆಗಳಿಗೆ ಉತ್ತರ ಸಿಕ್ಕುವುದಕ್ಕೆ ಅವಕಾಶ ಇರುವುದಿಲ್ಲ. ದಯವಿಟ್ಟು ಸರ್ಕಾರದವರು ಕೊನೆಯಪಕ್ಷ ಹೆಲ್ಡ್ ಓವರ್ ಪ್ರಶ್ನೆಗಳಿಗಾದರೂ ಉತ್ತರಗಳನ್ನೊದಗಿಸಬೇಕು.

(ಗೊಂದಲ)

ಉಪಾಧ್ಯಕ್ಷಿಣಿಯವರು:- ಒಂದು ದಿವಸ ಪೂರ್ತಿಯಾಗಿ ಹೆಲ್ಡ್ ಓವರ್ ಪ್ರಶ್ನೆಗಳನ್ನೇ ಹಾಕಿಕೊಳ್ಳುತ್ತೇನೆ.

(ಗೊಂದಲ)

ಉಪಾಧ್ಯಕ್ಷಿಣಿಯವರು:- ಈಗ ಪ್ರಶ್ನೋತ್ತರ ಕಾಲ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.. .

(ಗೊಂದಲ)

ಶ್ರೀ ಎಂ.ಮುನಿಸ್ವಾಮಿ:- ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ ಪ್ರಶ್ನೆ ಬರಲಿಲ್ಲ.

ಉಪಾಧ್ಯಕ್ಷಿಣಿಯವರು:-ನಾನು ಕರೆದಾಗ ತಾವು ಇಲ್ಲದಿದ್ದರೆ ನಾನೇನೂ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಜಿ.ಪುಟ್ಟಸ್ವಾಮಿಗೌಡ:- ತಾ.26-3-92ರ ಲಿಖಿತ ಮೂಲಕ ಉತ್ತರಿಸುವ 23ನೇ ಪಟ್ಟಿಯಲ್ಲಿರುವ. . .

(ಗೊಂದಲ)

ಉಪಾಧ್ಯಕ್ಷಿಣಿಯವರು:- ನೀವು ಸದನದ ಮುಂದೆ ಇಟ್ಟು ಬಿಡಿ.

ಶ್ರೀ ಎಲ್.ಆರ್.ಶಿವರಾಮೇಗೌಡ:-ನಿನ್ನೆ ರಾತ್ರಿ 9.30 ಗಂಟೆವರೆಗೆ ನಮ್ಮನ್ನು ಕಾಯುವಂತೆ ಮಾಡಿದ್ದೀರಿ. . .

(ಗೊಂದಲ)

ಉಪಾಧ್ಯಕ್ಷಿಣಿಯವರು:- ಈಗ 10.20ಕ್ಕೆ ಪ್ರಶ್ನೋತ್ತರ ಪ್ರಾರಂಭ ಮಾಡಿದೆ. 11.20ಗಂಟೆಗೆ ಪ್ರಶ್ನೋತ್ತರ ಕಾಲ ಮುಗಿಯುತ್ತದೆ. ತಾವು ಸಹಕಾರ ಕೊಡದಿದ್ದರೆ ಕಷ್ಟವಾಗುತ್ತದೆ. ಲಿಖಿತ ಮೂಲಕ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಉತ್ತರಗಳನ್ನು ತಾವು ಸಭೆಯ ಮುಂದೆ ಇಡಿ.

(ಗೊಂದಲ)

ಶ್ರೀ ಜಿ.ಪುಟ್ಟಸ್ವಾಮಿಗೌಡ:- ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸದಸ್ಯರ ಸ್ಫೂರ್ತಿಗೆ ನಾವು ಸ್ಪಂದಿಸಬೇಕಾಗುತ್ತದೆ. ಅವರು ಬಹಳ ಆಸಕ್ತಿಯಿಂದ ಹೆಚ್ಚು ಹೆಚ್ಚು ಉತ್ಸಾಹದಿಂದ ಪ್ರಶ್ನೆಗಳನ್ನು ಕೇಳಿ ಸರ್ಕಾರದಿಂದ ಉತ್ತರವನ್ನು ನಿರೀಕ್ಷಣೆ ಮಾಡತಕ್ಕ ಭರದಲ್ಲಿದ್ದಾರೆ. ಈ ಸಭೆಯನ್ನು ನಡೆಸುವುದಕ್ಕೆ ತನ್ನದೇ ಆದ ನಿಯಮಾವಳಿಗಳನ್ನು ರಚನೆ ಮಾಡಿಕೊಂಡಿದ್ದೇವೆ. ನಿಯಮಾವಳಿಗಳ ಅಡಿಯಲ್ಲಿ ಈ ಕೆಲಸ ನಡೆಯಬೇಕಾಗುತ್ತದೆ. ಈ ನಿಯಮಾವಳಿಗಳನ್ನು ಮಾಡುವ ಸಂದರ್ಭದಲ್ಲಿ ಎಲ್ಲಾ ಸಮಸ್ಯೆಗಳಿಗೂ ಪರಿಹಾರವನ್ನು ಕಂಡುಹಿಡಿದ ನಂತರ ಇದನ್ನು ರಚನೆಮಾಡಿದ್ದೇವೆ. ಈ ಸದನದ ಕಾರ್ಯಕಲಾಪಗಳು ಸುಲಲಿತವಾಗಿ ನಡೆಯಬೇಕು, ಜೊತೆಗೆ ಸದನದ ಪ್ರತಿಷ್ಠೆ ಕೂಡ ಮುಂದುವರಿಯಬೇಕೆಂಬ ಹಿನ್ನೆಲೆಯಲ್ಲಿ ಈ ನಿಯಮಗಳನ್ನು ಮಾಡಿದ್ದೇವೆ. ನಾವು ಆ ನಿಯಮಾವಳಿಗಳನ್ನು ಸನ್ಮಾನ್ಯ ಸದಸ್ಯರಿಗೆ ಈಗಾಗಲೇ ಪುಸ್ತಕದ ಮೂಲಕ ತಲುಪಿಸಿದ್ದೇವೆ. ತಾವು ಸಾಕಷ್ಟು ಓದಿದ್ದೀರಿ. ಹೆಲ್ಡ್ ಓವರ್ ಕೊಶ್ಚನ್‌ಗೆ ಉತ್ತರ ಬರಲಿಲ್ಲವೆಂದರೆ ಅದಕ್ಕೆ ತನ್ನದೇ ಆದ ಮಾರ್ಗವಿದೆ. ಸರ್ಕಾರ ಒಂದು ವೇಳೆ ಅಸೆಂಬ್ಲಿ ಕಾಲ ಮುಗಿದರೆ ಉತ್ತರಗಳನ್ನು ಅವರ ಮನೆಯ ಬಾಗಿಲಿಗೆ ಕಳುಹಿಸುವ ವ್ಯವಸ್ಥೆಯನ್ನು ಕೂಡ ಮಾಡಿದೆ. ಇಲ್ಲಿ ಅದನ್ನು

ತೆಗೆದುಕೊಳ್ಳುವುದಕ್ಕೆ ಬೇರೆ ಬೇರೆ ರೀತಿಯಲ್ಲಿ ಅಂದರೆ ಅರ್ಧಗಂಟೆ ಸಮಯಾವಧಿ ಚರ್ಚೆ ಮತ್ತು 68ರ ಕೆಳಗಡೆ ಬರತಕ್ಕಂಥ ಚರ್ಚೆಗೆ ಸಾಕಷ್ಟು ಅವಕಾಶವಿದೆ. ಅವುಗಳೆಲ್ಲಾ ಇರತಕ್ಕಂಥ ಸಂದರ್ಭದಲ್ಲಿ ನಾನು ಕೂಡ ನಮ್ಮ ಸದಸ್ಯರುಗಳೆಲ್ಲಾ ಓದಿ ಇವತ್ತು ಪ್ರಶ್ನೆಗಳನ್ನು ಕೇಳುತ್ತಿದ್ದರೆಂದು ತಿಳಿದುಕೊಂಡಿರುತ್ತೇನೆ. ಒಂದೇ ಸಾರಿ3-4 ಜನರು ಎದ್ದು ನಿಂತು ಈ ರೀತಿ ಕೇಳಿದರೆ ಮಾನ್ಯ ಅಧ್ಯಕ್ಷರಿಗೂ ಕಷ್ಟವಾಗುತ್ತದೆ, ಸರ್ಕಾರಕ್ಕೂ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದೆ. ಅದನ್ನೆಲ್ಲಾ ಅರಿತು ಅವರ ಜೊತೆಯಲ್ಲು ಸಹಕರಿಸಬೇಕೆಂದು ನಾನು ತಮ್ಮ ಮೂಲಕ ಅವರಿಗ ಹೇಳಬಯಸುತ್ತೇನೆ. ತಾವು ಲಿಖಿತಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲು ಹೇಳಿದ್ದೀರಿ. ಅದರಂತೆ. . . . .

(ಗೊಂದಲ)

ಉಪಾಧ್ಯಕ್ಷಿಣಿಯವರು:- ಮಾನ್ಯ ಶಿವರಾಮೇಗೌಡರೇ, ಈಗ ಒಂದು ಗಂಟೆಕಾಲ ಪ್ರಶ್ನೋತ್ತರವೇಳೆ ಇರುತ್ತದೆ. ಆದಾದಮೇಲೆ ಮುಂದಿನ ವಿಷಯಕ್ಕೆ ಹೋಗಬೇಕಾಗಿದೆ.

ಶ್ರೀ ಎಂ.ಮಹದೇವ್:-ಮಾನ್ಯ ಅಧ್ಯಕ್ಷಿಣಿಯವರೇ, ನಿಯಮಾವಳಿಯ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದರು. ಮತ್ತೆ ಪ್ರಶ್ನೆಯನ್ನು ಒಂದೇ ಸಲ ಕೇಳಬೇಕೆಂದೂ ಸಹ ಇದೆ. ಆದ್ದರಿಂದ ನಿಯಮಾವಳಿಯನ್ನು ತಿದ್ದುಪಡಿ ಮಾಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಮಾನ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದರು. ಈಗ ಮೂರು ದಿವಸಗಳಿಂದ ಪ್ರಶ್ನೆಗೆ ಉತ್ತರಗಳನ್ನು ನಿರೀಕ್ಷಣೆ ಮಾಡುತ್ತಿದ್ದೇನೆ. ನಮ್ಮ ಪ್ರಶ್ನೆಗಳು ಮೂರು ಮೂರು ಸಾರಿ ಸಭೆಯ ಮುಂದೆ ಬಂದರೂ ಉತ್ತರ ಕೊಡದೆ ಹೆಲ್ಡ್ ಓವರ್ ಆಗಿವೆ. ಮೂರು ದಿವಸಗಳಾದರೂ ಬರುವುದಿಲ್ಲ. ಮತ್ತೆ ಬೇರೆ ರೀತಿಯಲ್ಲೂ ಸದನದಲ್ಲಿ ಕೇಳುವುದಕ್ಕೆ ಅವಕಾಶವಿರುವುದಿಲ್ಲ. ಹೀಗಾದರೆ ನಾವು ಏನು ಮಾಡಬೇಕು?

ಶ್ರೀ ಜಿ.ಪುಟ್ಟಸ್ವಾಮಿಗೌಡ:- ನಿಯಮಾವಳಿಗಳಲ್ಲಿ ಸಾಕಷ್ಟು ಅವಕಾಶಗಳನ್ನು ಈಗಾಗಲೇ ಕಲ್ಪಿಸಿಕೊಡಲಾಗಿದೆ.

**ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು**

**ತೆಂಗು ಅಭಿವೃದ್ಧಿಗೆ ಪ್ರೋತ್ಸಾಹ ಧನ**

**442 (2127)ಶ್ರೀ ಜಿ.ಪಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)**

ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ತೆಂಗು ಅಭಿವೃದ್ಧಿ ಮಂಡಳಿಯವರು ತೆಂಗು ಅಭಿವೃದ್ಧಿ ಪ್ರೋತ್ಸಾಹ ಧನ ಹಾಗೂ ತೆಂಗಿನ ಅಣೆಗಳಿಗೆ ಧನ ಸಹಾಯ ಮಾಡುವುದ ನಿಜವೇ ;

ಆ) ಹಾಗಿದ್ದಲ್ಲಿ ಕಳೆದ ವರ್ಷ ಎಷ್ಟು ಎಕರೆಗಳಿಗೆ ತೆಂಗು ಅಭಿವೃದ್ಧಿ ಪ್ರೋತ್ಸಾಹ ಧನ ನಿಗದಿಯಾಗಿತ್ತು ಹಾಗು ಬಿಡುಗಡೆಯಾದ ಹಣವೆಷ್ಟು;

ಇ) ತೆಂಗಿನ ಅಣೆಗಳಿಗೆ ನಿಗದಿಯಾದ ಹಣ ಹಾಗೂ ಬಿಡುಗಡೆಯಾದ ಹಣವೆಷ್ಟು ;

ಈ) ತೆಂಗು ಅಭಿವೃದ್ಧಿ ವಿಸ್ತೀರ್ಣ (ಎಕರೆವಾರು) ಹೆಚ್ಚಿಸುವಲ್ಲಿ ಪ್ರಯತ್ನಿಸಲಾಗುವುದೇ ಹಾಗೂ ಎಕರೆಗೆ ಕೊಡುತ್ತಿರುವ ಮೊತ್ತವನ್ನು ಸಹ ಹೆಚ್ಚಿಸಲು ಪ್ರಯತ್ನಿಸಲಾಗುವುದೇ;

ಉ) ತೆಂಗಿನ ಅಣೆಗಳ ನಿರ್ಮಾಣ ಹೆಚ್ಚಾಗುವಂತೆ ಹಾಗೂ ಪ್ರತಿ ಅಣೆಗೆ ನಿಗದಿ ಮಾಡಿರುವ ಮೊತ್ತವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?